

بِسۡمِ اللّٰہِ الرَّحۡمٰنِ الرَّحِیۡم

# ಹಝ್ರತ್ ಮುಸ್ಲಿಹ್ ಮೌಊದ್

# ರಝಿಯಲ್ಲಾಹು ಅನ್‌ಹುರವರ ಕುರಿತು ಭವಿಷ್ಯವಾಣಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 17-02-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನಮಗೆಲ್ಲರಿಗೂ ತಿಳಿದಿರುವ ಹಾಗೆ ಫೆಬ್ರವರಿ ದಿನಾಂಕ 20 ಜಮಾಅತ್‌ನಲ್ಲಿ ಮುಸ್ಲಿಹ್ ಮೌಊದ್ ಭವಿಷ್ಯವಾಣಿಯ ದಿನವೆಂದು ಗಣಿಸಲಾಗುತ್ತಿದೆ. ಇದು ಒಂದು ಬೃಹತ್ ವೈಭವಶಾಲಿ ಭವಿಷ್ಯವಾಣಿಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಈ ಭವಿಷ್ಯವಾಣಿ ಮೂಲಕ ಒಬ್ಬ ಪ್ರಭಾವಶಾಲಿ ಪುತ್ರನು ಜನಿಸುವ ಸಮಾಚಾರ ನೀಡಲಾಗಿತ್ತು. ಆ ಪುತ್ರನ ಅಸಂಖ್ಯಾತ ವೈಶಿಷ್ಟ್ಯಗಳನ್ನು ಆ ಭವಿಷ್ಯವಾಣಿಯಲ್ಲಿ ವಿವರಿಸಲಾಗಿತ್ತು. ಆ ಪುತ್ರನಿಗೆ ದೀರ್ಘಾಯುಸ್ಸು ದೊರಕುವ ಬಗ್ಗೆ ಮತ್ತು ಮುಸ್ಲಿಹ್ ಮೌಊದ್ ಆಗಿರುವ ಆ ಪುತ್ರನ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ಥಾಪಿಸಿದ ಜಮಾಅತ್‌ಗೆ ಅಸಾಧಾರಣ ಅಭಿವೃದ್ಧಿ ದೊರಕುವುದೆಂದು ಸಹ ಭವಿಷ್ಯ ನುಡಿಯಲಾಗಿತ್ತು. **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್, ಅಲ್ ಮುಸ್ಲಿಹ್ ಮೌಊದ್** ಅವರ 52 ವರ್ಷಗಳ ಖಿಲಾಫತ್ ಕಾಲಘಟ್ಟದಲ್ಲಿ ಈ ಭವಿಷ್ಯವಾಣಿಯ ಎಲ್ಲಾ ಭಾಗಗಳು ಅಕ್ಷರಶಃ ಈಡೇರಿದುವು ಎಂಬುದಕ್ಕೆ ಅಹ್ಮದಿಯಾ ಜಮಾಅತಿನ ಚರಿತ್ರೆ ಸಾಕ್ಷಿಯಾಗಿದೆ. ನ್ಯಾಯ ನಿಷ್ಠನಾಗಿರುವ ಓರ್ವ ವ್ಯಕ್ತಿಗೆ, ಆಧ್ಯಾತ್ಮಿಕವಾಗಿ ದೃಷ್ಟಿ ಹೊಂದಿದವನಿಗೆ ಈ ಒಂದು ಭವಿಷ್ಯವಾಣಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯಸಂಧತೆಗೆ ಬಹಳ ದೊಡ್ಡ ಸಾಕ್ಷ್ಯಾಧಾರವಾಗಿದೆ. ಈಗ ಮೂರು ದಿನಗಳ ನಂತರ ಫೆಬ್ರವರಿ 20 ಬರಲಿದೆ. ಈ ದಿನ ನಾನು ಇದಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತಮ್ಮ ಸ್ವಂತ ಶಬ್ದಗಳಲ್ಲಿ ಹೇಳಿದ ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸುವೆನು. ಆ ಭವಿಷ್ಯವಾಣಿ ತಮ್ಮ ಮೂಲಕ ಈಡೇರಿದೆಯೆಂಬುದಕ್ಕೆ ದೈವಿಕ ಸೂಚನೆ ದೊರೆತ ಬಗ್ಗೆ ಪ್ರಕಾಶ ಬೀರುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರನ್ನು 1914ರಲ್ಲಿ ಅಲ್ಲಾಹನು ಖಿಲಾಫತ್ ಪದವಿಗೇರಿಸಿದನು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರಲ್ಲಿ ಮುಸ್ಲಿಹ್ ಮೌಊದ್ ಭವಿಷ್ಯವಾಣಿಯ ಎಲ್ಲ ಅಂಶಗಳು ಈಡೇರಿದುದಾಗಿ ಕಾಣಿಸುತ್ತಿದ್ದುವು. ಜಮಾಅತಿನ ವಿದ್ವಾಂಸರು ಮತ್ತು ಜನರಲ್ಲಿ ಬಹುತೇಕ ಮಂದಿ ಅವರೇ ಮುಸ್ಲಿಹ್ ಮೌಊದ್ ಎಂದು ಭಾವಿಸುತ್ತಿದ್ದರು. ಆದರೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು 1944ರ ವರೆಗೆ ಅದರ ಬಗ್ಗೆ ಸ್ವಯಂ ಏನೂ ಪ್ರಕಟಿಸಲಿಲ್ಲ. 1944ರಲ್ಲಿ ಅವರು ತನ್ನ ಒಂದು ದಿವ್ಯ ಸ್ವಪ್ನದ ಆಧಾರದಿಂದ 'ನಾನೇ ಮುಸ್ಲಿಹ್ ಮೌಊದ್' ಎಂದು ಪ್ರಕಟಿಸಿದರು. ಅವರು ಹೇಳಿದರು: 'ನನ್ನ ಪ್ರಕೃತಿ ಈ ಪ್ರಕಟಣೆ ನೀಡುವ ಬಗ್ಗೆ ಸಂಕೋಚಪಡುತ್ತಿದೆ. ನಾನು ಮುಸ್ಲಿಹ್ ಮೌಊದ್ ಆಗಿದ್ದರೆ, ಈ ಭವಿಷ್ಯವಾಣಿ ನನ್ನ ಮೂಲಕ ಈಡೇರಿರುವುದಾದರೆ ಅದರ ಬಗ್ಗೆ ವಾದ ಮಾಡುವ ಆವಶ್ಯಕತೆ ಏನಿದೆ ಎಂದು ನಾನು ಯೋಚಿಸುತ್ತಿದ್ದೆ. ಹಿಂದೆ ಮುಸ್ಲಿಮ್ ಉಮ್ಮತ್‌ನಲ್ಲಿ ಮುಜದ್ದಿದ್‌ಗಳಾಗಿದ್ದ ಜನರ ಪಟ್ಟಿಯನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತೋರಿಸಿದ ನಂತರ ಪ್ರಕಟಿಸಲಾಗಿತ್ತು. ಅವರ ಪೈಕಿ ಎಷ್ಟು ಜನರು ತಾವು ಮುಜದ್ದಿದ್ ಎಂದು ವಾದಿಸಿದ್ದಾರೆ? ಆದುದರಿಂದ ಅಲ್ಲಾಹನಿಂದ ನಿಯೋಜಿತನಾಗದ ವ್ಯಕ್ತಿ ವಾದಿಸುವ ಆವಶ್ಯಕತೆ ಇಲ್ಲ. ಆದರೆ ದೇವನಿಯೋಜಿತರ ಬಗ್ಗೆ ಇರುವ ಭವಿಷ್ಯವಾಣಿಗೆ ಸಂಬಂಧಿಸಿ ಅವರು ವಾದಿಸಬೇಕಾದುದು ಆವಶ್ಯಕವಾಗಿದೆ. ದೇವ ನಿಯೋಜಿತರಲ್ಲದವರ ಕೆಲಸ ಮಾತ್ರ ನೋಡಿದರೆ ಸಾಕು. ಕೆಲಸಗಳು ಈಡೇರಿವೆ ಎಂದು ಕಾಣಿಸುವುದಾದರೆ ವಾದ ಮಾಡುವ ಆವಶ್ಯಕತೆ ಏನಿದೆ. ದೇವ ನಿಯೋಜಿತ ಮುಜದ್ದಿದ್ ಆಗಿದ್ದರೆ ಅವರು ವಾದಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ದೇವ ನಿಯೋಜಿತ ಮುಜದ್ದಿದ್ ಆದ ಕಾರಣ ವಾದಿಸಿದರು. ನಾನು ಮುಸ್ಲಿಹ್ ಮೌಊದ್ ಎಂದು ವಾದಿಸುವ ಆವಶ್ಯಕತೆ ಇಲ್ಲ. ಇಂತಹ ವಿಷಯದ ಬಗ್ಗೆ ವಿರೋಧಿಗಳ ಆಕ್ಷೇಪಗಳಿಂದ ಗಾಬರಿಗೊಳ್ಳುವ ಆವಶ್ಯಕತೆಯೂ ಇಲ್ಲ. ಇದರಲ್ಲಿ ಅಪಮಾನಕರವಾದುದೇನೂ ಇಲ್ಲ. ಲೋಕದ ದೃಷ್ಟಿಯಲ್ಲಿ ಒಬ್ಬ ಮನುಷ್ಯನು ನೀಚನಾಗಿದ್ದರೂ ವಾಸ್ತವಿಕ ಗೌರವ ದೊರೆಯುವುದು ಅಲ್ಲಾಹನಿಂದ ಮಾತ್ರವಾಗಿದೆ. ಅವನು ಅಲ್ಲಾಹನ ಮಾರ್ಗದಲ್ಲಿ ಚಲಿಸುವವನಾದರೆ ಅವನು ಅಲ್ಲಾಹನ ಆಸ್ಥಾನದಲ್ಲಿ ಖಂಡಿತವಾಗಿಯೂ ಗೌರವವನ್ನು ಗಳಿಸುವನು. ಆದರೆ ಒಬ್ಬನು ಸುಳ್ಳನ್ನು ಅವಲಂಬಿಸುವವನಾದರೆ, ತನ್ನ ಸುಳ್ಳು ವಾದವನ್ನು ಸಾಬೀತು ಮಾಡಲು ತನ್ನ ಸಾಮರ್ಥ್ಯವನ್ನೂ ಚಾಲಾಕಿತನವನ್ನೂ ಬಳಸಿ ಜನರ ಮಧ್ಯೆ ಜಯಶಾಲಿಯಾದರೂ ಸಹ ಅಲ್ಲಾಹನ ಆಸ್ಥಾನದಲ್ಲಿ ಗೌರವವನ್ನು ಗಳಿಸಲಾರನು. ಯಾರಿಗೆ ಅಲ್ಲಾಹನ ಆಸ್ಥಾನದಲ್ಲಿ ಗೌರವ ಲಭಿಸಿಲ್ಲವೋ ಅವನು ಬಾಹ್ಯವಾಗಿ ಎಷ್ಟು ಗೌರವಿಸಲ್ಪಡುತ್ತಿದ್ದರೂ ಅವನು ಏನನ್ನೂ ಗಳಿಸಿರುವುದಿಲ್ಲ. ಅವನು ನಷ್ಟವನ್ನು ಅನುಭವಿಸಿದವನೇ ಆಗಿದ್ದಾನೆ. ಅವನು ಕೊನೆಗೆ ಹೀನೈಸಲ್ಪಡುವನು. ಆದುದರಿಂದ ಧಾರ್ಮಿಕ ಮತ್ತು ಲೌಕಿಕ ಕೆಲಸಗಳಲ್ಲಿ ಯಾವಾಗಲೂ ಸತ್ಯವನ್ನೇ ಅವಲಂಬಿಸಬೇಕು. ಯಾವ ವ್ಯಕ್ತಿ ಅಲ್ಲಾಹನಿಗೋಸ್ಕರ ನಷ್ಟ ಅನುಭವಿಸುತ್ತಾನೋ ಅವನು ವಾಸ್ತವಿಕವಾಗಿ ಲಾಭವನ್ನು ಹೊಂದಿದವನಾಗುತ್ತಾನೆ.'

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ತತ್ವವನ್ನು ಈ ಸಂದರ್ಭ ವಿವರಿಸಿರುತ್ತಾರೆ. ಯಾವ ಸತ್ಯದ ಜೊತೆ ಅಲ್ಲಾಹನಿದ್ದಾನೆಯೋ, ಯಾವುದನ್ನು ಅಲ್ಲಾಹನು ಸತ್ಯವೆಂದು ಗಣಿಸುತ್ತಾನೋ ಅದರ ಬಗ್ಗೆ ಅಲ್ಲಾಹನು ಪ್ರಾಯೋಗಿಕ ಸಾಕ್ಷ್ಯವನ್ನು ಸಹ ನೀಡುತ್ತಾನೆ. ಆದುದರಿಂದ ಅದರ ಬಗ್ಗೆ ವಾದವಾಗಲಿ ಪ್ರಕಟಣೆಯಾಗಲಿ ಆವಶ್ಯಕವಾಗಿಲ್ಲ. ಆದರೆ ಪ್ರಕಟಿಸಬೇಕೆಂದು ಅಲ್ಲಾಹನು ಸ್ವತಃ ಹೇಳುವುದಾದರೆ ಪ್ರಕಟಣೆ ಮಾಡಬಹುದಾಗಿದೆ. ಒಬ್ಬನು ಅಲ್ಲಾಹನ ಇಚ್ಛೆ ಪ್ರಕಾರ ಕೆಲಸ ಮಾಡುತ್ತಿರುವನೇ, ಅವನು ಅಲ್ಲಾಹನ ಕಡೆಯಿಂದ ಆಗಮಿಸಿದವನೇ, ಎಂದು ಪರೀಕ್ಷಿಸಬೇಕಾದರೆ, ಅಲ್ಲಾಹನಿಂದ ಅವನಿಗೆ ದೊರಕುವ ಸಹಾಯಗಳ ಮೂಲಕ ಪರೀಕ್ಷಿಸಬೇಕಾಗಿದೆ. ಒಟ್ಟಿನಲ್ಲಿ ಅಲ್ಲಾಹನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರೊಂದಿಗೆ ಮುಸ್ಲಿಹ್ ಮೌಊದ್ ತಾನೆಂದು ವಾದಿಸಲು ಹೇಳಿದಾಗ ಅವರು ವಾದಿಸಿದರು– ನಾನೇ ಮುಸ್ಲಿಹ್ ಮೌಊದ್ ಎಂದು. ಈ ವಾದ ಮಾಡಿದಾಗ ಜಮಾಅತಿನ ಜನರು ಸಂತೋಷಪಡುತ್ತಾ ಇದ್ದರು. ಆದರೆ ಬೈಅತ್ ಮಾಡದ ಗೈರ್ ಮುಬಾಈನ್‌ಗಳು ಆಕ್ಷೇಪಿಸಲು ಪ್ರಾರಂಭಿಸಿದರು.

1945ರ ಜಲ್ಸ ಸಾಲಾನದ ಡಿಸೆಂಬರ್ 27ರ ಭಾಷಣದಲ್ಲಿ ಮೌಲವಿ ಮುಹಮ್ಮದ್ ಅಲಿ ಸಾಹಿಬರಿಗೆ ಸಂಬಂಧಿಸಿ ಅವರು ಹೇಳಿದರು: 'ನಾನು ಮುಸ್ಲಿಹ್ ಮೌಊದ್ ಎಂದು ವಾದಿಸಿದ ನಂತರ ಮೌಲವಿ ಮುಹಮ್ಮದ್ ಅಲಿ ಸಾಹಿಬ್ ನನ್ನ ವಿರುದ್ಧ ಮಾಡುವ ಆಕ್ಷೇಪಗಳು ಮೌಲವಿ ಸನಾಉಲ್ಲಾಹ್ ಸಾಹಿಬರು ಮಾಡುತ್ತಾ ಇದ್ದ ಆಕ್ಷೇಪಗಳ ಹಾಗಿವೆ. ನಾನು ನನಗೆ ದೊರೆತ ಇಲ್‌ಹಾಮ್ ಅಥವಾ ಸ್ವಪ್ನದರ್ಶನವನ್ನು ವಿವರಿಸುತ್ತೇನೆ ಮತ್ತು ಅಲ್ಲಾಹನು ತೋರಿಸಿದ ಚಿಹ್ನೆಗಳ ಆಧಾರದಿಂದ ಪ್ರಕಟಣೆ ನೀಡುತ್ತಿದ್ದೇನೆ. ಆದರೆ ಮೌಲವಿ ಮುಹಮ್ಮದ್ ಅಲಿ ಸಾಹಿಬ್ ನನಗೆ ಉತ್ತರವಾಗಿ ಯಾವುದೇ ಸ್ವಪ್ನ ಅಥವಾ ಇಲ್‌ಹಾಮ್ ನನ್ನ ಮುಂದೆ ಇರಿಸುವುದಿಲ್ಲ. ಅವರಿಗೆ ಹಾಗೆ ಮಾಡಲು ಸಾಧ್ಯವೂ ಇಲ್ಲ. ಅವರಿಗೆ ಇಲ್‌ಹಾಮ್ ದೊರೆಯದಿದ್ದರೆ ಅವರು ಅದನ್ನು ಪ್ರಕಟಿಸುವುದಾದರೂ ಹೇಗೆ? ಆಕ್ಷೇಪ ಮಾಡುವ ಹೊರತು ಅವರ ಬಳಿಯಲ್ಲಿ ಬೇರೇನೂ ಇಲ್ಲ. ಅವರು ಆಕ್ಷೇಪ ಮಾಡದೆ ಇದ್ದರೆ ಅವರಿಗೆ ನನ್ನನ್ನು ಎದುರಿಸಲು ಸಾಧ್ಯವಾಗುವುದು ಹೇಗೆ? ಹಝ್ರತ್ ಇಬ್‌ರಾಹೀಂ, ಹಝ್ರತ್ ಮೂಸಾ, ಹಝ್ರತ್ ಈಸಾರವರ ವಿರೋಧಿಗಳು ಇಲ್‌ಹಾಮ್ ಅವತೀರ್ಣವಾಗುವುದಿಲ್ಲ ಎಂದು ಆಕ್ಷೇಪಿಸುತ್ತಿರಲಿಲ್ಲ. ಏಕೆಂದರೆ ಆ ಪ್ರವಾದಿಗಳ ಹಿಂದಿನ ಪ್ರವಾದಿಗಳಿಗೆ ಇಲ್‌ಹಾಮ್ ಆಗುತ್ತಿತ್ತು. ಆದುದರಿಂದ ಈ ಪ್ರವಾದಿಗಳ ವಿರೋಧಿಗಳು ಇಲ್‌ಹಾಮ್ ಎಂಬುದೇ ಇಲ್ಲ ಎಂದು ನಿರಾಕರಿಸಲು ಸಾಧ್ಯವಿರಲಿಲ್ಲ. ವಿರೋಧಿಗಳು ತಾವು ಹೇಳುವುದು ಸರಿ ಎಂದು ಹೇಳಿ ಪ್ರವಾದಿಗಳನ್ನು ಎದುರಿಸುತ್ತಾ ಹೇಳುತ್ತಿದ್ದರು: ಅವರು ಪ್ರಕಟಿಸುವ ಇಲ್‌ಹಾಮ್‌ಗಳು ಸ್ವಯಂ ನಿರ್ಮಿತ ಎಂದು. ಇದೇ ರೀತಿ ಮೌಲವಿ ಮುಹಮ್ಮದ್ ಅಲಿ ಹೇಳುತ್ತಾರೆ: ನನ್ನ ಇಲ್‌ಹಾಮ್ ಸುಳ್ಳೆಂದು. ಆದರೆ ಅಲ್ಲಾಹನು ನನ್ನನ್ನು ಎದುರಿಸಲು ಅವರಿಗೆ ಸತ್ಯವಾದ ಇಲ್‌ಹಾಮ್ ಅವತೀರ್ಣ ಗೊಳಿಸಿ, ಅವರು ಸತ್ಯದಲ್ಲಿದ್ದಾರೆ ಮತ್ತು ನಾನು ಸುಳ್ಳುಗಾರನಾಗಿದ್ದೇನೆ ಎಂದು ಜನರಿಗೆ ಸ್ಪಷ್ಟವಾಗುವಂತೆ ಏಕೆ ಮಾಡಿಲ್ಲ? ಆಶ್ಚರ್ಯಕರವಾದುದೇನೆಂದರೆ ಒಬ್ಬ ವ್ಯಕ್ತಿ ಹಗಲು ರಾತ್ರಿ ಅಲ್ಲಾಹನ ಸೃಷ್ಟಿಗಳನ್ನು ಮಾರ್ಗ ಭ್ರಷ್ಟರನ್ನಾಗಿ ಮಾಡುತ್ತಾ ಇರುತ್ತಾನೆ. ಹಗಲು ರಾತ್ರಿ ಮೋಸ, ವಂಚನೆ ಮೂಲಕ ಜನರನ್ನು ತಪ್ಪುದಾರಿಗೆ ಒಯ್ಯುತ್ತಾ ಇದ್ದಾನೆ. ಹೀಗಿದ್ದರೂ ಅಲ್ಲಾಹನು ಅವನ ವಿರುದ್ಧ ಕೋಪ ಪ್ರಕಟಿಸುವುದಿಲ್ಲ. ಹೀಗೆ ಕೋಪ ಪ್ರಕಟಿಸದಿರುವ ಕಾರಣವೇನೆಂದರೆ ಮೌಲವಿ ಸಾಹಿಬ್ ಭಾವಿಸುವ ಹಾಗೆ ಆ ವ್ಯಕ್ತಿ ವಂಚಕನಲ್ಲ. ಮೌಲವಿ ಸಾಹಿಬ್ ಅಲ್ಲಾಹನ ಸಾಮೀಪ್ಯದಿಂದ ಬಹಳ ದೂರದಲ್ಲಿದ್ದಾರೆ. ಆದುದರಿಂದ ಅಲ್ಲಾಹನು ಅವರಿಗೆ ಇಲ್‌ಹಾಮ್ ಮಾಡಿಲ್ಲ. ಒಟ್ಟಾರೆ ಹೇಳುವುದಾರೆ ಸತ್ಯದ ಎದುರಿಗೆ ಆರಂಭದಿಂದಲೇ ನಿರಾಕರಣೆ ಪ್ರಾರಂಭವಾಗಿತ್ತು'.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಕೆಲವು ಇಲ್‌ಹಾಮ್, ಕಶ್‌ಫ್(ದಿವ್ಯದರ್ಶನ) ಮತ್ತು ರುಯಾ(ದಿವ್ಯಸ್ವಪ್ನ)ಗಳ ಬಗ್ಗೆ ವಿವರಿಸುವೆನು. ಅವರು ತಾನು ಮುಸ್ಲಿಹ್ ಮೌಊದ್ ಎಂದು ಪ್ರಕಟಿಸಿದ ಸಂದರ್ಭದಲ್ಲಿ ಹೇಳಿದರು: "ನನಗೆ ಮುಸ್ಲಿಹ್ ಮೌಊದ್ ಸ್ಥಾನ ದೊರಕುವ ಬಗ್ಗೆ ಸೂಚನೆ ನೀಡಿದ ಇಲ್‌ಹಾಮ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜೀವಿಸಿದ್ದಾಗಲೇ ನನಗೆ ಲಭಿಸಿತ್ತು. ನಾನು ಆ ಇಲ್‌ಹಾಮ್ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿಸಿದ್ದೆನು. ಅವರು ಆ ಇಲ್‌ಹಾಮನ್ನು ತನ್ನ ಇಲ್‌ಹಾಮ್‌ಗಳನ್ನು ಬರೆಯುತ್ತಿದ್ದ ನೋಟ್‌ಬುಕ್‌ನಲ್ಲಿ ಬರೆದರು. ಆ ಇಲ್‌ಹಾಮ್ ನನಗೆ ಖಿಲಾಫತ್ ದೊರಕುವ ಬಗ್ಗೆ ಎಂದು ನಾನು ಮೊದಲು ಭಾವಿಸಿದ್ದೆನು. ಆದರೆ ಈಗ ನನಗೆ ತೋಚುವುದೇನೆಂದರೆ ಆ ಇಲ್‌ಹಾಮ್ ನನಗೆ ದೊರಕುವ ಈ ಸ್ಥಾನದ ಬಗ್ಗೆ ಸೂಚಿಸುತ್ತದೆ ಎಂದು. ಆ ಇಲ್‌ಹಾಮ್ ಈ ರೀತಿಯಿದೆ: **ಇನ್ನಲ್ಲದೀ಼ನತ್ತಬಊಕ ಫೌಖಲ್ಲದೀ಼ನ ಕಫರೂ ಇಲಾ ಯೌಮಿಲ್ ಖಿಯಾಮತಿ.** ನಿಶ್ಚಯವಾಗಿಯೂ ನಿನ್ನನ್ನು ಅನುಸರಿಸುವವರನ್ನು ನಿನ್ನನ್ನು ನಿರಾಕರಿಸುವವರ ಮೇಲೆ ಖಿಯಾಮತ್ ತನಕ ಜಯಶಾಲಿಗಳನ್ನಾಗಿ ಮಾಡುವೆನು.

ಈ ಇಲ್‌ಹಾಮ್‌ನಲ್ಲಿ ಒಂದು ಸೂಕ್ಷ್ಮ ಸೂಚನೆ ಇದೆ. ಅದು ಈ ಭವಿಷ್ಯವಾಣಿ ಈಡೇರುವ ಕ್ರಮದ ಬಗ್ಗೆ ತಿಳಿಸುತ್ತಾ ಇದೆ. ಇದೇ ರೀತಿಯ ಒಂದು ವಚನ ಹಝ್ರತ್ ಈಸಾ ಅಲೈಹಿಸ್ಸಲಾಮರಿಗೆ ಸಹ ಅವತೀರ್ಣವಾಗಿತ್ತು. ಆದರೆ ಅಲ್ಲಿ ಪ್ರಯುಕ್ತವಾದ ಶಬ್ದಗಳು ಈರೀಯಿತಿವೆ: **ವಜಾಇಲುಲ್ಲದೀ಼ನತ್ತಬಊಕ ಫೌಖಲ್ಲಝೀನ ಕಫರೂ ಇಲಾ ಯೌಮಿಲ್ ಖಿಯಾಮತಿ.**

ಆದರೆ ನನಗೆ ದೊರೆತ ಇಲ್‌ಹಾಮ್‌ನಲ್ಲಿ **ಇನ್ನಲ್ಲದೀ಼ನತ್ತಬಊಕ** ಎಂಬ ಶಬ್ದಗಳನ್ನು ಬಳಸಲಾಗಿದೆ. ಇದಕ್ಕೆ ಕಾರಣವೇನೆಂದರೆ ಹಝ್ರತ್ ಈಸಾ ಮಸೀಹ್ ಮೂಸವಿ ಶೃಂಖಲೆಯ ಕೊನೆಯ ಪ್ರವಾದಿ ಎಂದು ವಾದಿಸಿದ್ದರು. ಹೀಗೆ ವಾದಿಸುವವರ ಎದುರಿಗೆ ಮೊದಲು ಜನರು ವಿರೋಧ ಪ್ರಕಟಿಸುವುದು ಆವಶ್ಯಕವಾಗಿರುತ್ತದೆ.

ಒಂದು ದೀರ್ಘ ಕಾಲಾವಧಿಯ ನಂತರ ಜನರು ಆ ಪ್ರವಾದಿಯನ್ನು ನಂಬುತ್ತಾರೆ. ಆದರೆ ಮುಸ್ಲಿಹ್ ಮೌಊದ್ ಆಗುವವನನ್ನು ಅಲ್ಲಾಹನು ಖಲೀಫನನ್ನಾಗಿ ಮಾಡಲು ಇಚ್ಛಿಸಿದ್ದನು. ಖಲೀಫರಿಗೆ ಮೊದಲೇ ಸಿದ್ಧವಾಗಿರುವ ಒಂದು ಜಮಾಅತ್ ಸಿಗುತ್ತದೆ. ಆದುದರಿಂದ ಇಲ್ಲಿ **ಜಾಇಲುಲ್ಲದೀನ** ಎಂಬ ಪದ ಬಳಸಿಲ್ಲ. **ಇನ್ನಲ್ಲದೀನತ್ತಬಊಕ** ನಿನ್ನನ್ನು ಅನುಸರಿಸುವವರನ್ನು ಎಂದು ಹೇಳಿ ಅಲ್ಲಾಹನು ಹೀಗೆ ಸೂಚಿಸಿದ್ದಾನೆ: ನಿನ್ನನ್ನು ಒಂದು ಜಮಾಅತಿನ ಖಲೀಫನನ್ನಾಗಿ ಮಾಡಲಾಗುವುದು. ಅವರಿಗೆ ನಿನ್ನೊಂದಿಗಿನ ಸಂಬಂಧ ಬಲಿಷ್ಠವಾಗುತ್ತಾ ಹೋಗುವುದು. ಕೆಲವು ಜನರು ನಿನ್ನನ್ನು ವಿರೋಧಿಸುವರು. ಆದರೆ ನಿನ್ನನ್ನು ಬೈಅತ್ ಮಾಡುವವರು ನಿನ್ನನ್ನು ಎದುರಿಸುವವರ ವಿರುದ್ಧ ಖಿಯಾಮತ್‌ವರೆಗೆ ಜಯಗಳಿಸುತ್ತಾ ಮುಂದೆ ಸಾಗುವರು. ನೀನು ಇಮಾಮ್ ಆದ ಕೂಡಲೆ ವಿರೋಧ ಪ್ರಾರಂಭವಾಗುವುದು. ಜಮಾಅತ್ ನಿನ್ನ ಸುಪರ್ದಿಗೆ ನೀಡಲಾದ ದಿನದಿಂದ ನಿನ್ನನ್ನು ನಂಬುವವರು ನಿನ್ನ ವಿರೋಧಿಗಳ ವಿರುದ್ಧ ಜಯಗಳಿಸುತ್ತಾ ಹೋಗುವರು.

ನೀವು ನೋಡಿರಿ. ಹೀಗೆಯೇ ಸಂಭವಿಸಿತು. ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರ ಜಮಾಅತ್‌ಗೆ ಮುನ್ನೂರು ವರ್ಷಗಳ ನಂತರ ಜಯ ಲಭಿಸಿತು. ಆದರೆ ಅಲ್ಲಾಹನು ನನ್ನನ್ನು ಖಲೀಫನನ್ನಾಗಿ ಮಾಡಿದ ನಂತರ ಕೆಲವು ವಾರಗಳ ಒಳಗೆ ನನ್ನನ್ನು ವಿರೋಧಿಸುತ್ತಾ ಇದ್ದ ಜನರ, ನನ್ನ ಸ್ಥಾನವನ್ನು ನಿರಾಕರಿಸುತ್ತಿದ್ದವರ ಎಂದರೆ ಪೈಗಾಮಿಗಳ ಮೇಲೆ ನನಗೆ ಮತ್ತು ನನ್ನ ಜೊತೆಗಾರರಿಗೆ ಅಲ್ಲಾಹನು ಜಯ ನೀಡಲು ಪ್ರಾರಂಭಿಸಿದನು. ಈ ವಿಜಯ ಅಲ್ಲಾಹನ ಅನುಗ್ರಹದಿಂದ ದಿನಂಪ್ರತಿ ವರ್ಧಿಸುತ್ತಾ ಇದೆ. ಪೈಗಾಮಿಗಳು (ಬೈಅತ್ ಮಾಡದ ಜನರು) ಹೇಳುತ್ತಾರೆ– ಒಂದು ಸ್ವಪ್ನವನ್ನು ಅವಲಂಬಿಸಿ ವಾದ ಮಾಡಲಾಗಿದೆ. ಎಂದು. ಆದರೆ ಅದು ಸ್ವಪ್ನ ಮಾತ್ರವಲ್ಲ. ಅದರಲ್ಲಿ ಇಲ್‌ಹಾಮ್ ಶಬ್ದಗಳೂ ಇವೆ. ಆದರೆ ನಾನು ಮೇಲೆ ಬರೆದ ಇಲ್‌ಹಾಮ್ ನಲ್ವತ್ತು ವರ್ಷಗಳ ಹಿಂದೆ ನನಗೆ ದೊರೆತದ್ದಾಗಿದೆ. ಅಲ್ಲಾಹನು ಆ ಇಲ್‌ಹಾಮ್‌ನಲ್ಲಿ ಹೀಗೆ ತಿಳಿಸಿರುವನು: ನಾನು ಒಂದು ಜಮಾಅತಿನ ಇಮಾಮ್ ಆಗುವೆನು. ಸ್ವಲ್ಪ ಜನರು ನನ್ನನ್ನು ವಿರೋಧಿಸುವರು. ಆದರೆ ಬಹುಸಂಖ್ಯಾತರು ನನ್ನೊಂದಿಗೆ ಸೇರಿಕೊಳ್ಳುವರು. ಅವರಿಗೆ ಅಲ್ಲಾಹನು ಖಿಯಾಮತ್ ತನಕ ಇತರರ ಮೇಲೆ ಜಯ ನೀಡುವನು. ಎಂದರೆ ಖಿಲಾಫತ್ ಜೊತೆ ಇರುವವರಿಗೆ ಅಲ್ಲಾಹನು ಜಯ ನೀಡುವನು.

ನಿನ್ನನ್ನು ಅನುಸರಿಸುವವರಿಗೆ ನಿನ್ನನ್ನು ನಿರಾಕರಿಸುವವರ ಮೇಲೆ ಖಿಯಾಮತ್ ತನಕ ಅಲ್ಲಾಹನು ಜಯ ನೀಡುವನು ಎಂದು ಹೇಳಿದುದರ ಉದ್ದೇಶವೇನೆಂದರೆ, ಮುಂದೆ ಒಂದು ದಿನ ನಿನಗೆ ಮಸೀಹೆ ನಾಸಿರಿ ಮತ್ತು ಮಸೀಹೆ ಮುಹಮ್ಮದಿಯವರ ಹೆಸರನ್ನು ಝಿಲ್ಲೀ(ನೆರಳಿನ) ರೂಪದಲ್ಲಿ ನೀಡಲಾಗುವುದು. ಏಕೆಂದರೆ ಖಲೀಫರ ಜಮಾಅತ್ ಆ ಖಲೀಫರ ಜೀವಿತ ಕಾಲದ ತನಕ ಇರುತ್ತದೆ. ಆದರೆ ಪ್ರವಾದಿಗಳ ಮತ್ತು ಅವರ ನೆರಳಿನ ರೂಪದಲ್ಲಿರುವವರ ಜಮಾಅತ್ ಅವರು ಮೃತರಾದ ನಂತರ ಸಹ ಜಾರಿಯಲ್ಲಿ ಇರುತ್ತದೆ. ಕಫರೂ (ಕಾಫಿರ್ ಆದವರು) ಎಂಬ ಶಬ್ದ ಇದನ್ನೆ ಸೂಚಿಸುತ್ತದೆ. ಖಿಲಾಫತ್ ನಂತರ ನನಗೆ ಇನ್ನೊಂದು ಪದವಿ ಲಭಿಸಲಿದೆ ಎಂದು. ಆ ಪದವಿ ಕೆಲವು ಪ್ರವಾದಿಗಳ ನೆರಳಿನ (ಝಿಲ್ಲಿನ) ರೂಪದಲ್ಲಿರುವುದು. **ಸುಬ್‌ಹಾನಲ್ಲಾಹಿ ಲಾಯುಸ್‌ಅಲು ಅಮ್ಮಾ ಯಫ್‌ಅಲು.** ಅಲ್ಲಾಹನು ಪರಿಶುದ್ಧನು. ಅವನು ಏನನ್ನು ಮಾಡುತ್ತಾನೋ ಅದು ಪ್ರಶ್ನಿಸಲ್ಪಡಲಾರದು''.

ಹಝ್ರತ್ ಮುಸ್ಲಿಹ್ ಮೌಊದ್ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜೀವಿಸಿರುವಾಗಲೇ ನಾನೊಂದು ದಿವ್ಯ ದರ್ಶನ ಕಂಡಿದ್ದೆ. ಅದು ಸಹ ನನ್ನ ಈ ಪದವಿಯ ಬಗ್ಗೆ ಸೂಚಿಸುತ್ತದೆ. ನಾನು ದಿವ್ಯದರ್ಶನದಲ್ಲಿ ಹೀಗೆ ಕಂಡೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಾಸಿಸುತ್ತಾ ಇದ್ದ ಕೋಣೆಯಿಂದ ನಾನು ಹೊರಗೆ ಬಂದೆನು. ನಾನು ಹೊರಗೆ ಅಂಗಳಕ್ಕೆ ಬಂದಾಗ ಅಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದ್ದರು. ಆಗ ಅಲ್ಲಿಗೆ ಒಬ್ಬ ವ್ಯಕ್ತಿ ಬಂದು ಒಂದು ಪಾರ್ಸೆಲ್ ನನಗೆ ಕೊಟ್ಟು ಹೇಳಿದರು, ಇದು ನಿಮಗೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಎಂದು. ಆ ಪಾರ್ಸೆಲ್‌ನಲ್ಲಿ ಬರೆದ ವಿಳಾಸವನ್ನು ಆ ದಿವ್ಯದರ್ಶನದಲ್ಲಿಯೇ ನಾನು ನೋಡಿದೆ. ಅದರಲ್ಲಿ ಹೀಗೆ ಬರೆದಿತ್ತು: ಮುಹ್ಯುದ್ದೀನ್ ಮತ್ತು ಮುಈನುದ್ದೀನ್‌ರಿಗೆ ಸಿಗಲಿ ಎಂದು. ನಾನು ಕಶ್ಫ್‌ನಲ್ಲಿ ಯೋಚಿಸಿದೆ, ಒಂದು ಹೆಸರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಸೂಚಿಸುತ್ತದೆ. ಇನ್ನೊಂದು ನನ್ನನ್ನು ಸೂಚಿಸುತ್ತದೆ ಎಂದು. ನಾನು ಆಗ ಬಾಲಕನಾಗಿದ್ದೆ. ಹಝ್ರತ್ ಮುಹ್ಯುದ್ದೀನ್ ಇಬ್ನು ಅರಬಿಯ ಹೆಸರು ನನಗೆ ತಿಳಿದಿರಲಿಲ್ಲ. ಔರಂಗಝೇಬ್‌ಗೆ ಮುಹ್ಯುದ್ದೀನ್ ಎಂಬ ಹೆಸರಿತ್ತು ಎಂದು ತಿಳಿದಿದ್ದೆ. ಆದುದರಿಂದ ನಾನು ಗ್ರಹಿಸಿದೆ ಮುಹ್ಯುದ್ದೀನ್ ಎಂದರೆ ನಾನು ಎಂದು. ಹಝ್ರತ್ ಮುಈನುದ್ದೀನ್ ಚಿಶ್ತಿ ಸಾಹಿಬ್ ಹಿಂದೂಸ್ಥಾನದ ಒಬ್ಬ ಬಹುದೊಡ್ಡ ಸಂತರಾಗಿದ್ದರು. ಆದುದರಿಂದ ಮುಈನುದ್ದೀನ್ ಎಂದು ಸೂಚಿಸಿರುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಎಂದು ನಾನು ಭಾವಿಸಿದೆ. ಆದರೆ ಅನಂತರ ನನಗೆ ತಿಳಿಯಿತು. ಹಝ್ರತ್ ಮುಹ್ಯುದ್ದೀನ್ ಇಬ್ನು ಅರಬಿ ಸಹ ಬಹಳ ದೊಡ್ಡ ಸಂತರಾಗಿದ್ದರು ಎಂದು. ಆಗ ನನಗೆ ಮನವರಿಕೆಯಾಯಿತು ಮುಹ್ಯುದ್ದೀನ್ ಎಂಬುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಸೂಚಿಸುತ್ತದೆ ಎಂದು. ಅವರೇ ಇಸ್ಲಾಮ್ ಧರ್ಮವನ್ನು ಪುನಶ್ಚೇತನಗೊಳಿಸಿದರು. ಮುಈನುದ್ದೀನ್ ಎಂದರೆ ನಾನು. ನಾನು ಧರ್ಮಕ್ಕೆ ಸಹಾಯ ಮಾಡಿದೆ. ಆದುದರಿಂದ ಧರ್ಮವನ್ನು ಪುನಶ್ಚೇತನಗೊಳಿಸಿದವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಧರ್ಮಕ್ಕೆ ಸಹಾಯ ನೀಡಿರುವುದು ನಾನು ಎಂದು ಸ್ಪಷ್ಟವಾಯಿತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನನಗೆ ಮೂರನೆಯ ಇಲ್‌ಹಾಮ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ಲಭಿಸಿತು. ಅದು ಹೀಗಿದೆ: **ಇಅ್‌ಮಲೂ ಆಲದಾಊದ ಶುಕ್ರನ್.** ಓ ದಾವೂದ್ ಕುಟುಂಬದವರೇ, ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ಅವನ ಆಜ್ಞೆಗಳನ್ನು

ಅನುಷ್ಠಾನ ಮಾಡಿರಿ. ಈ ಇಲ್‌ಹಾಮ್‌ನಲ್ಲಿ **ಇಅ್‌ಮಲೂ** ಎಂದು ಹೇಳಿ ಅಲ್ಲಾಹನು ತನ್ನ ಇಚ್ಛೆ ಪ್ರಕಾರ ನಾವು ಪೂರ್ಣವಾಗಿ ಕಾರ್ಯಪ್ರವರ್ತಕರಾಗಬೇಕೆಂದು ಆಜ್ಞೆ ನೀಡಿದ್ದಾನೆ. **ಆಲ ದಾಊದ್** ಎಂದು ಹೇಳಿ ನನ್ನನ್ನು ಹಝ್ರತ್ ಸುಲೈಮಾನ್ ಅಲೈಹಿಸ್ಸಲಾಮರಿಗೆ ಹೋಲಿಸಿ ಹೇಳಲಾಗಿದೆ. ಹಝ್ರತ್ ಸುಲೈಮಾನ್ ಅಲೈಹಿಸ್ಸಲಾಮ್ ದಾಊದ್ ಅಲೈಹಿಸ್ಸಲಾಮರ ನಂತರ ಖಲೀಫರಾದ ಅವರ ಪುತ್ರರಾಗಿದ್ದರು.

ನನಗೆ ನೆನಪಿದೆ ಒಮ್ಮೆ ನಾನು ನನ್ನ ಸಮ ವಯಸ್ಕರೊಂದಿಗೆ ಗಾಳಿ ಸಂಚಾರ ಮಾಡುತ್ತಿದ್ದಾಗ ಈ ಇಲ್‌ಹಾಮ್ ಬಗ್ಗೆ ಪ್ರಸ್ತಾಪಿಸಿದೆ. ಆಗ ಫಕ್ಕನೆ ನನಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೃತರಾಗಿರುವ ಬಗ್ಗೆ ಮರೆವು ಉಂಟಾಯಿತು. ನಾನು ಓಡಿ ಹೋಗಿ ಈ ಇಲ್‌ಹಾಮನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿಸಬೇಕೆಂಬ ಉತ್ಸಾಹ ತಲೆದೋರಿತ್ತು.

ನಾಲ್ಕನೆಯ ಸಾಕ್ಷ್ಯ ನನಗೆ ಕಾಣಿಸಿದ ಇನ್ನೊಂದು ಕಶ್‌ಫ್ ಆಗಿದೆ. ನಾನು ಬೈತುದ್ದುಆದಲ್ಲಿ ಕುಳಿತು ದುಆ ಮಾಡುತ್ತಿದ್ದುದಾಗಿ ಕಶ್‌ಫ್‌ನಲ್ಲಿ ಕಂಡೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಬ್‌ರಾಹೀಂ ಆಗಿದ್ದರೆಂದು ಫಕ್ಕನೆ ನನಗೆ ಪ್ರಕಟಿಸಲಾಯಿತು. ಈ ಉಮ್ಮತ್‌ನಲ್ಲಿ (ಸಮುದಾಯದಲ್ಲಿ) ಬೇರೆ ಅನೇಕ ಇಬ್ರಾಹೀಮರು ಸಹ ಇದ್ದರೆಂದು ನನಗೆ ಅಲ್ಲಾಹನಿಂದ ತಿಳಿಸಲಾಯಿತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಇಬ್ರಾಹೀಮ್ ಅದ್‌ಹಮ್ ಆಗಿದ್ದರೆಂದೂ ನೀನು ಸಹ ಒಬ್ಬ ಇಬ್ರಾಹೀಮ್ ಆಗಿರುವೆ ಎಂದು ಸಹ ತಿಳಿಸಲಾಯಿತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಫಾತ್‌ಗೆ ಸಮೀಪವಾಗಿದ್ದ ಕಾಲದಲ್ಲಿ ನನಗೆ ಅಲ್ಲಾಹನಿಂದ ದೊರೆತ ಐದನೆಯ ಸಾಕ್ಷ್ಯ ಹೀಗಿದೆ: ನಾನು ಒಂದು ದಿವ್ಯ ಸ್ವಪ್ನದಲ್ಲಿ ಕಂಡೆನು. ಗಂಟೆ ಬಾರಿಸುತ್ತಿದೆ. ಅದರ ಶಬ್ದ ಹೇಗಿದೆ ಎಂದರೆ ಹಿತ್ತಾಳೆಯ ಒಂದು ಹಂಡೆಗೆ ಯಾವುದಾದರೂ ಒಂದು ವಸ್ತುವಿನಿಂದ ಬಡಿಯುತ್ತಾ ಇದ್ದರೆ ಅದರಿಂದ ಟನ್‌ಟನ್ ಎಂಬ ಶಬ್ದ ಹೊರಡುವ ಹಾಗೆ. ಈ ಗಂಟೆಯಿಂದ ಇದೇ ಶಬ್ದ ಕೇಳಿಸುತ್ತಿತ್ತು. ಆದರೆ ಆ ಶಬ್ದ ಬಹಳ ಸುಶ್ರಾವ್ಯವಾಗಿತ್ತು. ಎಲ್ಲಾ ಲೋಕದ ಸಂಗೀತದ ಸ್ವರಗಳು ಅದರಲ್ಲಿ ತುಂಬಿಸಿದ ಹಾಗೆ ಭಾಸವಾಗುತ್ತಿತ್ತು. ಈ ಶಬ್ದ ಹೆಚ್ಚಾಗುತ್ತಾ ಹೋಯಿತು. ಅದು ದಿಗಂತದಲ್ಲಿ ಒಂದು ಫ್ರೇಮಿನ ರೂಪದಲ್ಲಿ ರೂಪ ಪಡೆಯಿತು. ಆ ಫ್ರೇಮಿನೊಳಗೆ ಒಂದು ಚಿತ್ರ ಪ್ರಕಟವಾಯಿತು. ಅದು ಅತ್ಯಂತ ಸುಂದರವಾಗಿತ್ತು. ನಂತರ ಆ ಚಿತ್ರ ಅಲುಗಾಡತೊಡಗಿತು. ಆ ಚಿತ್ರದಿಂದ ಒಂದು ರೂಪ ನನ್ನ ಮುಂದೆ ನೆಗೆದು ಬಂದು ನಿಂತಿತು. ಅದು ಅಲ್ಲಾಹನ ದೂತ(ಮಲಕ್) ಎಂದು ನಾನು ಗ್ರಹಿಸಿದೆ. ಆ ದಿವ್ಯ ರೂಪ ನನ್ನೊಂದಿಗೆ, ಬಾ ನಾನು ನಿನಗೆ ಸೂರತುಲ್ ಫಾತಿಹದ ಅರ್ಥ ಕಲಿಸುತ್ತೇನೆ ಎಂದು ಹೇಳಿದರು. ಅನಂತರ ಅವರು ನನಗೆ ಸೂರತುಲ್ ಫಾತಿಹದ ದರ್ಸ್ ನೀಡತೊಡಗಿದರು. **ಇಯ್ಯಾಕ ನಅ್‌ಬುದು ವಇಯ್ಯಾಕ ನಸ್ತಈನ್** ಎಂಬ ವಚನದ ದರ್ಸ್ ನೀಡುವಾಗ ಹೇಳಿದರು: ಇಷ್ಟರ ತನಕ **ಮಾಲಿಕಿ ಯೌಮಿದ್ದೀನ್** ತನಕ ಮಾತ್ರ ತಫ್‌ಸೀರ್ ಬರೆಯಲಾಗಿದೆ. ನಾನು ನಿನಗೆ ಅದರ ಮುಂದಿನ ವಚನಗಳ ತಫ್‌ಸೀರ್ ಸಹ ಕಲಿಸುವೆನು. ಹಾಗೆ ಅವರು ನನಗೆ ಸೂರತುಲ್ ಫಾತಿಹದ ಪೂರ್ಣ ತಫ್‌ಸೀರ್ ಕಲಿಸಿದರು. ನನಗೆ ಎಚ್ಚರವಾದಾಗ ಸ್ವಪ್ನದಲ್ಲಿ ದೇವದೂತ ಕಲಿಸಿದ ತಫ್‌ಸೀರಿನ ಕೆಲವು ವಿಷಯಗಳು ನನಗೆ ನೆನಪಿದ್ದುವು. ಆದರೆ ನಾನು ಅವುಗಳನ್ನು ಬರೆದಿಡಲಿಲ್ಲ. ಅನಂತರ ನಾನು ಅವುಗಳನ್ನು ಮರೆತೆನು. ನಾನು ಬೆಳಗ್ಗೆ ಈ ಸ್ವಪ್ನದ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರಿಗೆ ತಿಳಿಸಿದಾಗ ಅವರು ಸಿಟ್ಟಿನಿಂದ, ನೀನು ಎಷ್ಟು ಜ್ಞಾನವನ್ನು ವ್ಯರ್ಥ ಮಾಡಿದೆ. ನೀನು ಅದನ್ನು ಬರೆದಿಡಬೇಕಾಗಿತ್ತು ಎಂದು ಹೇಳಿದರು.

ಹಝ್ರತ್ ಮುಸ್ಲಿಹ್ ಮೌಊದ್ ಹೇಳುತ್ತಾರೆ: ಆದರೆ ಈಗ ಸೂರತುಲ್ ಫಾತಿಹದ ಹೊಸ ಹೊಸ ಅರ್ಥಗಳನ್ನು ಅಲ್ಲಾಹನು ನನಗೆ ನಿರಂತರವಾಗಿ ಮನವರಿಕೆ ಮಾಡಿಕೊಡುತ್ತಾನೆ. ನನಗೆ ಕಂಡ ಸ್ವಪ್ನದ ನಿಜವಾದ ಅರ್ಥವೇನೆಂದರೆ, ನನ್ನ ಆಂತರಿಕ ಶಕ್ತಿಯಲ್ಲಿ ಸೂರತುಲ್ ಫಾತಿಹದ ಜ್ಞಾನ ವಿಶಿಷ್ಟವಾಗಿ ಮತ್ತು ಪವಿತ್ರ ಖುರ್‌ಆನಿನ ಜ್ಞಾನ ಸಾಮಾನ್ಯವಾಗಿ ಇರಿಸಲಾಗಿದೆ. ಅದು ಆಂತರಿಕ ಇಲ್‌ಹಾಮ್ ರೂಪದಲ್ಲಿ ಆವಶ್ಯಕವಾದಾಗ ಪ್ರಕಟಗೊಳ್ಳುತ್ತಾ ಇರುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪುನಃ ಹೇಳುತ್ತಾರೆ: ಜಮಾಅತ್‌ನಲ್ಲಿ ಬಿನ್ನಾಭಿಪ್ರಾಯಗಳು ತಲೆದೋರಿದಾಗ ಅಲ್ಲಾಹನು ನನಗೆ ತಿಳಿಸಿದನು: **ಲನುಮಝ್ಝಿಖನ್ನಹುಮ್.** ನಿಶ್ಚಯವಾಗಿಯೂ ನಾವು ಅವರನ್ನು ತುಂಡು ತುಂಡಾಗಿ ಮಾಡುವೆವು. ಆ ಸಮಯದಲ್ಲಿ ಖಿಲಾಫತ್ ವಿರೋಧಿಗಳು ತಾವು ಜಮಾಅತಿನ ಶೇಕಡಾ 95ರಷ್ಟಿದ್ದೇವೆ ಎಂದು ಹೇಳುತ್ತಿದ್ದರು. ಆದರೆ ಈಗ ಅವರ ಸ್ಥಿತಿ ಹೇಗಿದೆ. ಅಲ್ಲಾಹನು ಈ ಭವಿಷ್ಯವಾಣಿ ಪ್ರಕಾರ ಅವರನ್ನು ತುಂಡು ತುಂಡಾಗಿ ಮಾಡಿದನು. (ಅವರ ಒಬ್ಬ ನಾಯಕನಾಗಿದ್ದ) ಖ್ವಾಜಾ ಕಮಾಲುದ್ದೀನ್ ಸಾಹಿಬ್ ತನ್ನ ವಫಾತ್‌ಗೆ ಮೊದಲು ಬರೆದರು: 'ಮಿರ್ಝಾ ಮಹ್‌ಮೂದ್ ನಮ್ಮ ಬಗ್ಗೆ ಪ್ರಕಟಿಸಿದ ಇಲ್‌ಹಾಮ್ ಸಂಪೂರ್ಣವಾಗಿ ಈಡೇರಿದೆ. ನಾವು ವಾಸ್ತವಿಕವಾಗಿ ತುಂಡು ತುಂಡಾಗಿರುವೆವು'.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪುನಃ ಹೇಳುತ್ತಾರೆ: 'ಮುಸ್ಲಿಹ್ ಮೌಊದ್ ರೂಹೆಹಖ್(ಸತ್ಯದ ಆತ್ಮದಿಂದ) ತುಂಬಿರುವನು ಎಂದು ಭವಿಷ್ಯವಾಣಿಯಲ್ಲಿ ಹೇಳಿದ ಮಾತನ್ನು ಅಲ್ಲಾಹನು ಅನೇಕ ಸಾರಿ ನನಗೆ ಅದೃಶ್ಯ ಸಮಾಚಾರಗಳನ್ನು ನೀಡಿ ಈ ಭವಿಷ್ಯವಾಣಿಯನ್ನು ಸತ್ಯವೆಂದು ಸಾಬೀತುಗೊಳಿಸಿರುವನು. ಇವು ಅಲ್ಲಾಹನು ನನ್ನ ಮೂಲಕ ಪ್ರಕಟಿಸಿದ ದೃಷ್ಟಾಂತಗಳಾಗಿವೆ'.

ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರಿಗೆ ಸಂಬಂಧಪಟ್ಟಂತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಭವಿಷ್ಯವಾಣಿಗೆ ಸುದೀರ್ಘವಾದ ವಿವರಣೆಗಳಿವೆ. ಈ ಭವಿಷ್ಯವಾಣಿಗೆ ಸಂಬಂಧಿಸಿ

ಜಮಾಅತ್‌ಗಳಲ್ಲಿ ಜಲ್ಸಗಳು ನಡೆಯುವುವು. ಎಂ.ಟಿ.ಎ.ದಲ್ಲೂ ಕಾರ್ಯಕ್ರಮಗಳು ಬಿತ್ತರಿಸಲಾಗುತ್ತಿವೆ. ಜಮಾಅತಿನ ಜನರು ಇವುಗಳನ್ನು ಹೆಚ್ಚು ಹೆಚ್ಚಾಗಿ ಆಲಿಸಬೇಕು ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಈ ಭವಿಷ್ಯವಾಣಿ ಬಗ್ಗೆ ಗಾಢವಾದ ಜ್ಞಾನ ಆ ಮೂಲಕ ಗಳಿಸಬಹುದು. ಈ ಭವಿಷ್ಯವಾಣಿಯಲ್ಲಿ ಅಸಂಖ್ಯಾತ ದೃಷ್ಟಾಂತಗಳಿವೆ. ಅವು ಹಝ್ರತ್ ಮುಸ್ಲಿಹ್ ಮೌಊದ್‌ರಲ್ಲಿ ವೈಭವದಿಂದ ಪೂರ್ಣವಾದುವು.

*****


***Friday Sermon delivered by Hadrath Khaleefatul Masih Al Khamis(atba)***

*At, Masjid Baithul Futhuh, London on 17-02-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon